**ಇಂದು ದಿನಾಂಕ:*07.11.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲು : 4 ನೇ ಪ್ರತಿವಾದಿ ಪರ ಶ್ರೀ. ವಕೀಲರಿಂದಃ</u>**

ನನ್ನ ತಾತ ಬಸಪ್ಪರವರ ಆಸ್ತಿಯಲ್ಲಿ ಭಾಗಕ್ಕಾಗಿ ಕೇಸು ಹಾಕಿದ್ದೇನೆ. ನನ್ನ ತಂದೆಯ ಹೆಸರು ಕೂಡ ಬಸಪ್ಪ. ನನ್ನ ತಾತನಿಗೆ ಒಬ್ಬನೇ ಮಗ. ನನ್ನ ತಂದೆಗೆ 7 ಜನ ಮಕ್ಕಳು. ಅವರೆಂದರೆ ವಾದಿಗಳು ಮತ್ತು ಪ್ರತಿವಾದಿಗಳು ಹಾಗೂ ಮೃತ ಸರೋಜ. ನನ್ನ ಅಕ್ಕ ಸರೋಜಳಿಗೆ ಇಬ್ಬರು ಮಕ್ಕಳು. ಅವರೆಂದರೆ ಮಹೇಶ ಮತ್ತು ಭಾರತಿ. ಭಾರತಿರವರನ್ನು ಈ ಕೇಸಿನಲ್ಲಿ ಸೇರಿಸಿಲ್ಲ. ವಾದ ಪತ್ರ ಸಲ್ಲಿಸುವಾಗ ನಮ್ಮ ವಂಶವೃಕ್ಷದ ಬಗ್ಗೆ ನಮ್ಮ ವಕೀಲರಿಗೆ ಹೇಳಿದ್ದೇನೆ. ಧರೇಶರವರ ಆಸ್ತಿಯನ್ನು ಈ ಕೇಸಿನಲ್ಲಿ ಬಿಟ್ಟಿದ್ದೇನೆ. ಧರೇಶರವರಿಗೆ ಬಿಟ್ಟಿರುವ 6½ ಎಕರೆ ಆಸ್ತಿಯನ್ನು ಈ ಕೇಸಿನಲ್ಲಿ ಸೇರಿಸಿಲ್ಲ. ಧರೇಶರವರು ಬಂದಿಲ್ಲ ಆದ್ದರಿಂದ ಅವರ ಆಸ್ತಿಗಳನ್ನು ಸೇರಿಸಿಲ್ಲ. ದಾವಾ ಆಸ್ತಿಗಳಲ್ಲಿ ನಾನು ಉಳುಮೆ ಮಾಡುತ್ತಿಲ್ಲ. 4 ನೇ ಪ್ರತಿವಾದಿ ಉಳುಮೆ ಮಾಡುತ್ತಿರುವ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ದಾವೆಯಲ್ಲಿ ಯಾವ ಯಾವ ಸರ್ವೆ ನಂಬರ್ ಸೇರಿಸಿದ್ದೇನೆ ಎಂದು ಗೊತ್ತಿಲ್ಲ. ಸೈಟು ಮತ್ತು ಮನೆಗಳನ್ನು ಈ ಕೇಸಿನಲ್ಲಿ ಸೇರಿಸಿಲ್ಲ. 4 ನೇ ಪ್ರತಿವಾದಿ ಸ್ವಯಾರ್ಜಿತ ಜಮೀನು ಖರೀದಿಸಿದ್ದಾರೆ ಎಂದರೆ ಸುಳ್ಳು. 4 ನೇ ಪ್ರತಿವಾದಿ ¾ ಎಕರೆ ಗದ್ದೆ, 1 ನಿವೇಶನ ಹಾಗೂ 1 ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ. ಅವುಗಳನ್ನು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ಗೊತ್ತಿಲ್ಲ. ಆ ರೀತಿ ಮಾರಾಟ ಮಾಡಿರುವ ಆಸ್ತಿಗಳನ್ನು ಕೇಸಿನಲ್ಲಿ ಸೇರಿಸಲು ತೊಂದರೆ ಇರಲಿಲ್ಲ.

**ಮುಂದುವರಿದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ**